## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 258/2024**

| | | | |
|---|---|---|---|
| ಸಾಕ್ಷಿದಾರರು | : | ರವಿಕುಮಾರ್ | ಸಿ.ಡಬ್ಲ್ಯೂ : 1 |
| ತಂದೆ ಹೆಸರು | : | ಬೋರೇಗೌಡ | ಪಿ.ಡಬ್ಲ್ಯೂ : 7 |
| ವಯಸ್ಸು | : | 44 ವರ್ಷ | |
| ವೃತ್ತಿ | : | ಖಾಸಗೀ ಕೆಲಸ | |
| ವಾಸ ಸ್ಥಳ | : | ಜಯಂತಿ ನಗರ ಗ್ರಾಮ | |

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಮುಖ್ಯ ವಿಚಾರಣೆ ಮಾಡಲು ಅನುಮತಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 21.07.2024 ರಂದು ನಾನು ಬೇರೆಯವರ ಸ್ಕೂಟರನ್ನು ತೆಗೆದುಕೊಂಡು ಪಾಂಡವಪುರ ರೈಲ್ವೆ ನಿಲ್ದಾಣಕ್ಕೆ ಹೋಲೀಗಿ ವಾಪಸ್ಸು ಬರುವಾಗ ಲೋಕೇಶ್ ಎಂಬುವವರಿಗೆ ಸ್ಕೂಟರನ್ನು ವಾಪಸ್ಸು ಕೊಡಲು ಕರೆ ಮಾಡಿದೆನು. ಲೋಕೇಶ್ ರವರು ಜಯಂತಿ ನಗರದ ಗೇಟಿನ ಮುಂದೆ ಎಸ್ ಎಲ್ ಸಿ ಚತ್ರ, ಇಟ್ಟಿಗೆ ಫ್ಯಾಕ್ಟರಿಯ ಮಣ್ಣಿನ ಗುಡ್ಡೆ ಬಳಿ ಇರುವುದಾಗಿ ತಿಳಿಸಿದರು. ನಾನು ಅಲ್ಲಿಗೆ ಹೋದೆನು. ಆ ಸಮಯದಲ್ಲಿ ಲೋಕೇಶ್ ಎಂಬುವವರು ಅಲ್ಲಿ ಇರಲಿಲ್ಲ ರಾಜೇಶ್ ಎಂಬುವವರು ಇದ್ದರು. ರಾಜೆಶ್ ರವರು ಮಧ್ಯಪಾನ ಮಾಡುತ್ತಿದ್ದರು, ರಾಜೇಶರವರನ್ನು ಲೋಕೇಶ ಎಲ್ಲಿ ಎಂದು ಕೇಳಿದೆನು. ಸ್ವಲ್ಪ ಸಮಯ ಈಗ ಇಲ್ಲೆ ಇದ್ದರೂ ಬರುತ್ತಾರೆ ಎಂದು ರಾಜೇಶ್ ತಿಳಿಸಿದರು.

ನಾನು ರಾಜೇಶ್ ಕುಳಿತುಕೊಂಡು ಸ್ವಲ್ಪ ಮದ್ಯಪಾನ ಮಾಡಿದೆನು. ನಂತರ ಲೋಕೇಶ್ ರವರರಿಗೆ ಪುನಃ ಕರೆ ಮಾಡಲು ನನ್ನ ಮೊಬೈಲ್ ತೆಗೆದುಕೊಂಡೆನು. ನಾನು ರಾಜೇಶ್ ರವರ ಆಟೋ ಬಳಿ ನಿಂತಿದ್ದಾಗ ರಾಜೇಶ್ ಹಿಂಭಾಗದಿಂದ ಬಂದು ನನ್ನ ಕತ್ತಿನ ಪಟ್ಟಿಗೆ ಕೈ ಹಾಕಿ ಆಟೋದ ಒಳಗಡೆ ತಳ್ಳಿದರು. ಬೋಳಿಮಗನೆ ಎಂದು ಬೈದು, ರಾಜೇಶ್ ಗೂ ನನಗೂ ಹಣಕಾಸಿನ ವಿಚಾರಕ್ಕೆ ಮೊದಲೆ ಮನಸ್ತಾಪ ಇತ್ತು. ನಾನು ಮತ್ತು ರಾಜೇಶ್ ಮೊದಲು ಮಾತನಾಡುತ್ತಿರಲಿಲ್ಲ. ನಮ್ಮ ತಾಯಿಗೆ ಉಷಾರು ಇಲ್ಲದೆ ಇದ್ದಾಗ ರಾಜೆಶ್ ಬಳಿ ನಾನು ಹಣ ಕೇಳಿದ್ದೆ ಅವರು ಹಣ ಕೊಡಲಿಲ್ಲ ಆದ್ದರಿಂದ ನನಗೂ ಅವರಿಗೂ ಮನಸ್ತಾಪ ಇತ್ತು. ನನ್ನ ಮೆಟರೇ ಅಮುಗಿ ಕಿರುಕುಳ ಕೊಟ್ಟರು. ನನಗೆ ಹೃದ ಸಮಸೆಉ ಇದೆ ಒಂದು ರಾಜೇಶ್ ಗೆ ಗೊತ್ತಿದ್ದರೂ ನನ್ನ ಬಾಯಿ ಮುಗನ್ನು ಅಮುಕಿ ಹಿಡಿದು, ಮರ್ಮಾಂಗವನ್ನು ಅಮುಕಿ ಬಿಡುವುದಿಲ್ಲ ಎಂದು, ಎದೆ, ಹೊಟ್ಟೆಗೆ ಬೆನ್ನಿಗೆ ನನಗೆ ಬಾಯಿಂದ ಕಚ್ಚಿದರು. ಚಾಸಾ.2 ರವರು ಆ ಭಾಗದ ಕಡೆಗೆ ಹೋಗುತ್ತಿದ್ದರು. ಅವರು ಬಂದು ನನ್ನನ್ನು ಬಿಡಿಸಿದರು. ಅಷ್ಟೇ ದಿನ ಸರ್ಕಾರಿ ಆಸಸಿಪಿತಪಿೆರೆ ಗಪಾಂಡವಪುರಕ್ಕೆ ಹೊವ್ರೋಗಿ ಚಿಕಿತ್ಸೆ ಪಡೆದುಕೊಂಡೆನು. ಹೇಚ್ಚಿನ ಚಿಕಿತ್ಸೇಗಾಗಿ ಮೈಸೂರಿನ ಜಿಲ್ಲಾಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಲು ವೈದ್ಯರು ಸಲಹೆ ನೀಡಿದರು. ದರಂತೆ ದಿಃ 22.07.2024 ರಂದು ಮೈಸೂರಿಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆನು. ಶಿವಶಂಕರ್ ಮತ್ತು ಅನಿಲ್ ರವರುಗಳು ಊರಿನಲ್ಲಿ ಕುಳಿತು ಮಾತನಾಡೋಣ ಎಂದು ತಿಳಿಸಿದ್ದರಿಂದ ದೂರು ನೀಡಿರಲಿಲ್ಲ. ಆರೋಪಿ ತೀರ್ಮಾನಕ್ಕೆ ಬರದೆ ಇದ್ದ ಕಾರಣ ದಿಃ 26.07.2024 ರಂದು

ದೂರು ನೀಡಿದೆನು. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10 ಎ ಎಂದು ಗುರುತಿಸಲಾಯಿತು.

2. ದಿಃ 27.07.2024 ರಂದು ಪೊಲೀಸರು ಮಹಜರು ಮಾಡಲು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು. ನಾನೇ ಪೊಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿದೆನು. ಚಾಸಾ.7 ಮತ್ತು 8 ರವರ ಸಮಕ್ಷಮ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ.7 ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ.7 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ.9 ರಲ್ಲಿ ಸಾಕ್ಷಿ ತಾನಿರುವುದಾಗಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

3. ನಿಮ್ಮ ಸ್ವಂತ ಊರು ಯಾವುದು ಎಂದರೆ ಸಾಕ್ಷಿ ಸೀಳನೆರೆ ಚಟ್ಟೇನಹಳ್ಳಿ , ಕೆ ಆರ್ ಪೇಟೆ ತಾಲ್ಲೂಕು ಎಂದು ಹೇಳುತ್ತಾರೆ. ನಮ್ಮ ತಂದೆ ಕಾಲದಲ್ಲಿಯೇ ನಾವು ಕೆನ್ನಾಲು ಗ್ರಾಮಕ್ಕೆ ಬಂದು ಸೇರಿಕೊಂಡಿದ್ದೆವು. ಈಗಲೂ ನೀವು ಮದ್ಯಾಪಾನ ಮಾಡಿಕೊಂಡು ಬಂದಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿ ಸುಮಾರು 20 ವರ್ಷಗಳಿಂದ ನನಗೆ ಪರಿಚಯ. ಆರೋಪಿಯ ಮಗನ ಶಿಕ್ಷಣಕ್ಕಾಗಿ ನಾನು ಬೇರೆಯವರಿಂದ ರೂ.1 ವರೆ ಲಕ್ಷ ಹಣವನ್ನು ಆರೋಪಿಗೆ ಕೊಡಿಸಿಕೊಟ್ಟಿದ್ದೆನು. ಅದಕ್ಕೆ ಯಾವುದೆ ದಾಖಲೆ ಮಾಡಿಕೊಂಡಿಲ್ಲ.

ಆರೋಪಿ ಹಣ ಕೊಟ್ಟಿಲ್ಲ ಎಂದು ಆರೋಪಿ ವಿರುದ್ಧ ದೂರು ನೀಡಿಲ್ಲ. ದಿಃ 21.07.2024 ರ ಪೂರ್ವದಲ್ಲಿ ನಿಮಗೂ ಆರೋಪಿಗೂ ಗಲಾಟೆ ಎನಾದರೂ ಆಗಿತ್ತಾ ಎಂದರೆ ಸಾಕ್ಷಿ ನಾನು ಇಲ್ಲದ ಸಮಯದಲ್ಲಿ ಪ್ರಕಾಶ ಮತ್ತು ರಾಜೇಶ ಎಂಬುವವರು ನಮ್ಮ ಮನೆ ಮೇಲೆ ದಾಳಿ ಮಾಡಿದರು ಎಂದು ಹೇಳುತ್ತಾರೆ. ಆಗ ನನ್ನ ತಮ್ಮ ಹೇಮಂತ್ ಕುಮಾರ್ ಮನೆಯಲ್ಲಿದ್ದರು. ನಾನು ವಿವಾಹವಾಗಿಲ್ಲ.

4. ಪ್ರಕಾಶ್ ಮತ್ತು ರಾಜೇಶರ ಮೇಲೆ ದೂರು ದಾಖಲಾಗಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಿಃ 21.07.2024 ರಂದು ಉಕ್ಕಡ ದೇವಸ್ಥಾನದ ಹತ್ತಿರ ಮಂಜುನಾಥ ಬೇಕರಿ ಬಳಿ ಲೋಕೇಶರವರಿಂದ ಬೆಳಿಗ್ಗೆ 10.30 ರಿಂದ 11 ಗಂಟೆ ಒಳಗಡೆ ಪಡೆದುಕೊಂಡೆನು. ಕೆಲಸದ ಮೇಲೆ ಪಾಂಡವಪುರ ರೈಲ್ವೆ ನಿಲ್ದಾಣದ ಬಳಿ ಬಂದಿದ್ದೆನು. ಆ ದಿನ ಲೋಕೇಶ್ ಆ ಸ್ಥಳಕ್ಕೆ ಬರಲಿಲ್ಲ. ಮಧ್ಯಾಹ್ನ 12 ಗಂಟೆಗೆ ಲೋಕೇಶ್ ರವರ ಗಾಡಿಯನ್ನು ವಾಪಸ್ಸು ಕೊಟ್ಟೆನು. ಜಗಳವಾದ ವಿಚಾರವನ್ನು ಲೋಕೇಶ್ ಬಳಿ ಗಾಡಿ ಕೊಡಲು ಹೋದಾಗ ಹೇಳಿದೆನು. ಲೋಕೇಶ್ ರವರು ಈ ಪ್ರಕರಣದಲ್ಲಿ ಸಾಕ್ಷೀದಾರರಾಗಿಲ್ಲ. ಎಸ್ ಎಲ್ ವಿ ಚತ್ರದ ಬಳಿ ಜನಗಳು ಯಾರು ಇರಲಿಲ್ಲ. ಆ ಮಣ್ಣು ಗುಡ್ಡೆಯ 100 ಮೀಟರ್ ದೂರದಲ್ಲಿ ಬಾರ್ ಇದೆ ಆ ಬಾರಿನಲ್ಲಿ ಸಿ ಸಿ ಕ್ಯಾಮೇರಾ ಇದೆ ಎಂದರೆ ಸರಿ. ಸಿಸಿ ಕ್ಯಾಮೇರಾದಲ್ಲಿ ಘಟನಾವಳಿಗಳು ಸೆರೆಯಾಗುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಿಮಗೂ ಮತ್ತು ರಾಜೇಶ್ ಗೆ ಮಾತುಕತೆ ಇಲ್ಲ ಎಂದ ಮೇಲೆ ಏಕೆ ನೀವು ಮಧ್ಯ

*ಕುಡಿಯಲು ಕುಳಿತುಕೊಂಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ತಾಯಿ ಕಾರ್ಯಕ್ಕೆ ಬಂದಿದ್ದರು ಹಾಗೂ ಎರಡು ಮೂರು ಸಲ ಮಾತನಾಡಿದೆವು ಎಂದು ಹೇಳುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ರಾಜೇಶ್ ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.*

5. *ಆ ದಿನ ನೀವು ಯಾವ ಬಣ್ಣದ ಶರಟನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ಹೇಳುತ್ತಾರೆ. ನಿಮ್ಮನ್ನು ಈಗ ವೈದ್ಯರ ಬಳಿ ಕಳುಹಿಸಿ ಮದ್ಯಾಪಾನ ಮಾಡಿರುತ್ತೀರಾ ಇಲ್ಲವಾ ಎಂಬುದನ್ನು ಪರೀಕ್ಷಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ರಕ್ತಗಾಯವಾಗಿತ್ತಾ ಎಂದರೆ ಸಾಕ್ಷಿ ರಕ್ತ ಹೊರಗೆ ಬಂದಿರಲಿಲ್ಲ, ಹೆಪ್ಪುಗಟ್ಟಿದ ಗಾಯವಾಗಿತ್ತು ಎಂದು ಹೇಳುತ್ತಾರೆ. ಬಟ್ಟೆಯನ್ನು ಎತ್ತಿ ಆರೋಪಿ ಕಚ್ಚಿದ್ದರು. ಈ ಸಂಗತಿಯನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಕೂಗಿಕೊಂಡಾಗ ಯಾರು ಬರಲಿಲ್ಲ. ಕೂಡಲೇ ಹೋಗಿ ಚಿಕಿತ್ಸೆ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನೀವು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದ್ವೇಷದಿಂದ ಆರೋಪಿಗೆ ತೊಂದರೆ ಕೊಡಲು ತದನಂತರ ಚಿಕಿತ್ಸೆ ಪಡೆದುಕೊಂಡು ದೂರು ನೀಡಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿ ಯಾವತ್ತು ನಿಮ್ಮಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.*

*7. ದಿಃ 26.07.2024 ರಂದು ದೂರು ನೀಡಿದೆನು. ಪಂಚಾಯಿತಿಗೆ ಜಯಂತಿನಗರ ರಾಮಮಂದಿರದ ಬಳಿ ಸೇರಿದ್ದೆವು. ದಿಃ 24.07.2024 ರಂದು ಪಂಚಾಯತಿಯಿನ್ನು ರಾಮಮಂದಿರದ ಬಳಿ ಸಂಜೆ 5.00 ರಿಂದ 6 ಗಂಟೆ ನಡುವೆ ಸೇರಿದ್ದೆವು. ಆರೋಪಿ ಆ ಪಂಚಾಯತಿಗೆ ಬರಲಿಲ್ಲ. ನಾನು ಎಸ್ ಎಸ್ ಎಲ್ ಸಿ ಯಲ್ಲಿ ಅನುತ್ತೀರ್ಣನಾಗಿದ್ದೇನೆ. ದೂರಿನಲ್ಲಿ ಪಂಚಾಯಿತಿ ಸೇರಿದ್ದ ಬಗ್ಗೆ ಹಾಗೂ ಆರೋಪಿ ಬಾರದೆ ಇರುವ ಬಗ್ಗೆ ತಿಳಿಸಿಲ್ಲ. ದಿಃ 24.07.2024 ರಂದು ಯಾವುದೇ ಪಂಚಾಯತಿ ಸೇರಿರಲಿಲ್ಲ ಎಂದರೆ ಸರಿಯಲ್ಲ. ದಿಃ 27.07.2024 ರಂದು ಪೊಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ವೈಧ್ಯರ ಬಳಿ ಆರೋಪಿ ಮಣ್ಣಿನ ಗುಡ್ಡೆ ಬಳಿ ಆಟೋ ಒಳಗಡೆ ಕಚ್ಚಿದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆಯಾಗಲಿ ಎಂದು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***